# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 250/2016 ಪಿ.ಡಬ್ಲ್ಯೂಃ 2

ಸಿಡಬ್ಲೂಃ 5

ಸಾಕ್ಷಿದಾರರ ಹೆಸರು : ಸುರೇಶ

ತಂದೆಯ ಹೆಸರು : ದೇಮು ಕೊಬ್ರೇಕರ

ವಯಸ್ಸು : 72 ವರ್ಷ

ಉದ್ಯೋಗ : ನಿವೃತ್ತ ಅಬಕಾರಿ ರಕ್ಷಕ,

ವಾಸ್ತವ್ಯ : ನಂದನಗದ್ದಾ , ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 01-08-2023

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನಾನು 2007 ರಿಂದ ಜನೆವರಿ 2012 ರ ವರೆಗೆ ಕಾರವಾರ ವಲಯದಲ್ಲಿ ಅಬಕಾರಿ ರಕ್ಷಕನಾಗಿ ಕೆಲಸ ನಿರ್ವಹಿಸಿದ್ದೇನೆ.

2. ದಿನಾಂಕಃ 31.03.2010 ರಂದು ಚಾಸಾ.1 ರವರು, ನಾನು , ಚಾಸಾ.4 ರವರು ಇಲಾಖಾ ವಹನ ಸಂಖ್ಯೆ ಕೆ ಎ 30 ಜಿ 333 ನೇದರ ಮೇಲಾಗಿ ಅಬಕಾರಿ ಅಕ್ರಮಗಳನ್ನು ತಡೆಯುದಕ್ಕಾಗಿ ಮಾಜಾಳಿಯಲ್ಲಿ ಗಸ್ತುಕಾರ್ಯ ಮಾಡುತ್ತಿದ್ದೆವು. ಆಗ ಚಾಸಾ.1 ರವರಿಗೆ ಗಾಂವಗೇರಿಯಿಂದ ಸುಮಾರು ಒಂದು ಕಿಮೀ ಅಂತರದಲ್ಲಿ ಕೊಠಾರದಲ್ಲಿ ಆಟೋ ರಿಕ್ಷಾ ಸಂಖ್ಯೆ ಕೆ ಎ 30 8794 ನೇದರ ಮೇಲಾಗಿ ಒಬ್ಬ ವ್ಯಕ್ತಿ ಅಕ್ರಮವಾಗಿ ಗೋವಾ ಮದ್ಯವನ್ನು ಸಾಗಾಟ ಮಾಡುತ್ತಿದ್ದಾನೆಂದು ಮಾಹಿತಿ ಬಂದಿತು. ನಂತರ ಚಾಸಾ.1 ರವರು ಗಾಂವಗೇರಿಯಲ್ಲಿ ಸಿಕ್ಕ ಚಾಸಾ.2 ಮತ್ತು 3 ರವರಿಗೆ ಸದರಿ ವಿಷಯವನ್ನು ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದಾಗ ಅವರು ಒಪ್ಪಿದರು. ನಂತರ ಸದರಿ ವಾಹನಕ್ಕಾಗಿ ಕಾಯುತ್ತಿರುವಾಗ ಕೊಠಾರ ಕಡೆಯಿಂದ ಒಂದು ಆಟೋ ರಿಕ್ಷಾ ಬರುವುದು ಕಂಡು ಬಂದಿತು. ಅದನ್ನು ನಿಲ್ಲಿಸಲು ಚಾಲಕನಿಗೆ ಚಾಸಾ.1 ರವರು ಸೂಚಿಸಿದಾಗ ಚಾಲಕನು ವಾಹನವನ್ನು ನಿಲ್ಲಿಸಿರುತ್ತಾನೆ. ಚಾಸಾ.1 ರವರು ಚಾಲಕನಿಗೆ ಅಟೋದಲ್ಲಿ ಏನಿದೆ ಎಂದು ಕೇಳಿದಾಗ ಅಕ್ರಮವಾಗಿ ಗೋವಾ ಮದ್ಯ ಇರುವುದಾಗಿ ತಿಳಿಸಿದನು. ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ ಪಡೆಯಲು ಸಮಾಯಾವಕಾಶ ಇಲ್ಲದಿರುವ ಕಾರಣ ಚಾಸಾ.1 ರವರು ಕ.ಅ.ಕಾಯ್ದೆಯ ಕಲಂ 54 ರಡಿಯ ಶೋಧನಾ ಸಮ್ಮುಚಿತ ಆಧಾರ ವರದಿಯನ್ನು ತಯಾರಿಸಿದರು.

3. ನಂತರ ಪಂಚರ ಸಮಕ್ಷಮ ಆಟೋ ರಿಕ್ಷಾ ವನ್ನು ಪರಿಶೀಲಿಸಲಾಗಿ ರಿಕ್ಷಾದಲ್ಲಿ ಒಟ್ಟು 8 ಮೂಟೆಗಳು ಇರುವುದು ಕಂಡು ಬಂದಿರುತ್ತದೆ. ಅವುಗಳನ್ನು ಸವಿಸ್ತಾರವಾಗಿ ಪರಿಶೀಲಿಸಲಾಗಿ 1 ರಿಂದ 5 ತಲಾ ಮೂಟೆಯಲ್ಲಿ 750 ಎಂ ಎಲ್ ನ ಲೈಫಹಾರ್ಸ ಪ್ರಿಮಿಯಂ ವಿಸ್ಕಿ 48 ರಂತೆ ಒಟ್ಟು 540 ಬಾಟಲುಗಳು ಇರುವುದು ಕಂಡು ಬಂದಿತು. ನಂತರ ಒಂದು ಚೀಲದಲ್ಲಿ 750 ಎಂ ಎಲ್ ನ 48 ಕೊಕೊನೆಟ್ ಫೆನ್ನಿ ಇರುವುದು ಕಂಡು ಬಂದಿತು. ನಂತರ ಇನ್ನು ಉಳಿದ ಎರಡು ಮೂಟೆಗಳಲ್ಲಿ 90 ಎಂ ಎಲ್ ನ ರಿಯಲ ಹನಿ ಓಲ್ಡ ಗ್ರೇಪ ಬ್ರಾಂಡಿ ತಲಾ ಮೂಟೆಯಲ್ಲಿ 300 ರಂತೆ ಒಟ್ಟು 600 ಸ್ಯಾಚೇಟಗಳು ಇರುವುದು ಕಂಡು ಬಂದಿತು. ಈ ಎಲ್ಲಾ ಬಾಟಲುಗಳ ಮೇಲೆ for sale in Goa ಎಂದು ನಮೂದಾಗಿತ್ತು. ಯಾವುದೇ ರಹದಾರಿ ಪತ್ರ ಸಿಗಲಿಲ್ಲಾ . ಸದರಿ ವ್ಯಕ್ತಿಯ ಹೆಸರನ್ನು ಕೇಳಲಾಗಿ ಅವನ ಹೆಸರು ಪ್ರಶಾಂತ ಗೋಪಿನಾಥ , ಸಾಃ ಸೀಬರ್ಡ ಕಾಲೋನಿ ಎಂದು ತಿಳಿಸಿದನು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಸ್ದ್ರಿ ವಾಹನವನ್ನು ಪರಿಶೀಲಿಸಲಾಗಿ ಅದು ಪ್ರಯಾಣಿಕ ರಿಕ್ಷಾ ಆಗಿದ್ದು ಅದರ ನೋಂದಣಿ ಸಂಖ್ಯೆ ಕೆ ಎ 30 /8794 ಆಗಿತ್ತು. ಸದರಿ ರಿಕ್ಷಾದಲ್ಲಿ ಆರ್ ಸಿ ಪುಸ್ತಕ 2008 ದೊರಕಿರುತ್ತದೆ.

4. ನಂತರ ರಸಾಯನಿಕ ಪರೀಕ್ಷೆಗಾಗಿ ಪ್ರತೀ ಬ್ರಾಂಡಿನಿಂದ ಒಂದರಂತೆ ಒಟ್ಟು 2 ಬಾಟಲು ಮತ್ತು 2 ಸ್ಯಾಚೇಟನ್ನು ತೆಗೆದು ಅವುಗಳಿಗೆ ಬಟ್ಟೆಯನ್ನು ಸುತ್ತು ದಾರದಿಂದ ಸುತ್ತಿ ಅರಗಳನ್ನು ಹಾಕಿ ಇಲಾಖಾ ಶೀಲ್ ದಿಂದ ಸೀಲ್ ಮಾಡಲಾಯಿತು. ನಂತರ ಸಣ್ಣ ಸಣ್ಣ ಮಾದರಿ ಚೀಟಿಗಳನ್ನು ತಯಾರಿಸಿ ಅವುಗಳಿಗೆ ಚಾಸಾ.1, 2 ಮತ್ತು 3 ರವರ ಸಹಿ ಇರುವ ಚೀಟಿಯನ್ನು ಸ್ದ್ರಿ ಬಾಟಲುಗಳಿಗೆ ಅಂಟಿಸಲಾಯಿತು. ಪಂಚನಾಮೆಯನ್ನು ಸುಮಾರು 9.00 ರಿಂದ 10.30 ರವರೆಗೆ ಬರೆದು ಮುಗಿಸಲಾಯಿತು. ನ್ಯಾಯಾಲಯದ ಮುಂದಿರುವ ನಿಪಿ.1 ನ್ನು ನೋಡಿ ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು ಮಾ ಗಳನ್ನು ನೋಡಿ ಗುರುತಿಸುತ್ತೇನೆ. ನಂತರ ಚಾಸಾ.1 ರವರು ಜಪ್ತು ಮಾಡಿದ ಮದ್ಯವನ್ನು , ಆರೋಪಿ ಮತ್ತು ವಾಹನದೊಂದಿಗೆ ಠಾಣೆಗೆ ಬಂದು ಸರಕಾರದ ಪರವಾಗಿ ದೂರನ್ನು ದಾಖಲಿಸಿರುತ್ತಾರೆ. ಅರೋಪಿಯನ್ನು ನೋಡಿ ಗುರುತಿಸುತ್ತೇನೆ. ದಾಳಿಯ ಕಾಲಕ್ಕೆ ಚಾಸಾ.1 ರವರಿಗೆ ಅಗತ್ಯ ಸಹಾಯ ಮಾಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಪಿ ಜೆ ಪಿ ಆರೋಪಿ ಪರ ವಕೀಲರಿಂದ**

5. ಮು ಮಾ ಗಳ ಮೇಲೆ ನಾವು ಮತ್ತು ಪಂಚರು ಸಹಿ ಮಾಡಿರುತ್ತೇವೆ. ಈಗ ನ್ಯಾಯಾಲಯದ ಮುಂದಿರುವ ಮು ಮಾ ಗಳ ಮೇಲೆ ಯಾವುದೇ ಸಹಿ ಇರುವುದಿಲ್ಲಾ ಎಂದರೆ ಸರಿ. ಚಾಸಾ.1 ರವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ಮಾಹಿತಿ ಬಂದ ಸಮಯದಲ್ಲಿ ನಾವು ಮಾಜಾಳಿಯಲ್ಲಿ ಬೆಳಿಗ್ಗೆ 8 ರಿಂದ

ಗಸ್ತು ಕಾರ್ಯದಲ್ಲಿದ್ದೆವು. ಮಾಹಿತಿ ಚಾಸಾ.1 ರವರಿಗೆ 8.45 ಗಂಟೆಗೆ ಬಂದಿತು. ಕೊಠಾರದಲ್ಲಿ ಸಾಕಷ್ಟು ಜನಸಂಚಾರ , ವಾಹನಸಂಚಾರ ಇರುತ್ತದೆ ಎಂದರೆ ಸರಿ. ಘಟನಾ ಸ್ಥಳದ ಸುತ್ತಮುತ್ತ ಸುಮಾರು 25 –30 ಮನೆಗಳಿವೆ ಎಂದರೆ ಸರಿ. ಘಟನಾ ಸ್ಥಳ ಕೊಠಾರದಿಂದ ಒಂದು ಕಿಮೀ ಅಂತರದಲ್ಲಿದೆ. ಪಂಚರನ್ನು ಮಾಜಾಳಿ–ಗಾಂವಗೇರಿಯಿಂದ ಚಾಸಾ.1 ರವರು ಕರೆದುಕೊಂಡು ಬಂದರು. ನಿಪಿ.1 ನ್ನು ಪಂಚರಾದ ಚಾಸಾ.2 ರವರು ಬರೆದರು. ನಾವು ಗಸ್ತುಕಾರ್ಯಕ್ಕೆ ಹೋಗುವ ಪೂರ್ವದಲ್ಲಿ ಠಾಣಾ ಡೈರಿಯಲ್ಲಿ ನಮೂದಿಸುತ್ತೇವೆ ಎಂದರೆ ಸರಿ.

6. ಸದರಿ ದಿನದಂದು ನಾನು ಮತ್ತು ನಮ್ಮ ಮೇಲಾಧಿಕಾರಿಗಳು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿದ್ದ ಮು ಮಾ ಗಳನ್ನು ಬಳಸಿಕೊಂಡು ನಮ್ಮ ಠಾಣೆಯಲ್ಲಿ ಪಂಚನಾಮೆ ಮಾಡಿ ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ . ಮು.ಮಾಲುಗಳಿಗೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಚಾಸಾ.1 ರವರ ಮಾತಿನ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಹೆ.ಪ್ರ ದ.ನ್ಯಾದಂ. ಕಾರವಾರ**